1	2	3	4	5
ಗ್ರಾಮೀಣ ಆಶ್ರಯ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ	20000	–	20000
	ಸಾಮಾನ್ಯ	10000	10000	20000
ಗ್ರಾಮೀಣ ಅಂಬೇಡ್ಕರ್	ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ	20000	–	20000

ಆ) ತಾರತಮ್ಯವಿದೆ. ಯೋಜನೆಯ ಮಾರ್ಗಸೂಚಿಯಂತೆ ನಗರ ಪ್ರದೇಶಗಳಿಗೆ ಸಹಾಯಧನ ನೀಡಲಾಗುತ್ತಿಲ್ಲ.

ಇ) ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ತೀರ್ಮಾನಿಸಲಾಗುವುದು.

ತುರುವೇಕೆರೆಯಲ್ಲಿ ಅಪೂರ್ಣಗೊಂಡ ಪ್ರಥಮ ದರ್ಜೆ ಕಾಲೇಜು ಕಟ್ಟಡ ಪೂರ್ಣಗೊಳಿಸುವ ಬಗ್ಗೆ

2955(2816) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ನಗರದಲ್ಲಿ ಕಾಲೇಜಿಗೆ ಸರ್ಕಾರಿ ಕಟ್ಟಡ ಮಂಜೂರಾದದ್ದು ಯಾವಾಗ;

ಆ) ಎಷ್ಟು ಕೊಠಡಿಗಳನ್ನು ಕಟ್ಟಲು ಆದೇಶ ಮಾಡಲಾಗಿತ್ತು. ಅದರ ಅಂದಾಜು ಎಷ್ಟು;

ಇ) ಹಾಗಿದ್ದಲ್ಲಿ, ಇದುವರೆವಿಗೂ ಕಟ್ಟಡ ಮುಗಿಯದಿರಲು ಕಾರಣವೇನು;

ಈ) ಹಾಗಿದ್ದಲ್ಲಿ, ಪ್ರಸ್ತುತ ವರ್ಷ ಹಣ ನೀಡಿ ಪೂರ್ಣಗೊಳಿಸಲಾಗುವುದು?

ಡಾ: ಜಿ. ಪರಮೇಶ್ವರ್ (ಉನ್ನತ ಸಚಿವರು)

ಅ) ದಿನಾಂಕ 18–02–1993

ಆ) ಕಟ್ಟಡದ ಒಟ್ಟು ಅಂದಾಜು 36 ಲಕ್ಷ. ಇದರಲ್ಲಿ ರೂ. 15 ಲಕ್ಷಗಳ ವೆಚ್ಚದಲ್ಲಿ ಮೊದಲನೇ ಹಂತದ ಕಟ್ಟಡದ ನಿರ್ಮಾಣಕ್ಕಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಆ ಪ್ರಕಾರ ಸದರಿ ಅನುದಾನದಲ್ಲಿ

ಪ್ರಾಂಶುಪಾಲರ ಕೊಠಡಿ	–	1
ಗ್ರಂಥಾಲಯ ಕೊಠಡಿ	–	1 ಇವುಗಳನ್ನು
ಕಛೇರಿ ಕೊಠಡಿ	–	1 ನಿರ್ಮಿಸಲಾಗಿದೆ
ಎನ್‌ಸಿಸಿ ಕೊಠಡಿ	–	1

ಇ) ಅನುದಾನದ ಕೊರತೆಯಿಂದಾಗಿ ಕಟ್ಟಡ ಪೂರ್ಣಗೊಳಿಸಲಾಗಿಲ್ಲ.

ಈ) ಈ ಕಾಲೇಜನ್ನು ಅಪೂರ್ಣ ಕಟ್ಟಡಗಳನ್ನು ಪೂರ್ಣಗೊಳಿಸುವ ಕಾಲೇಜು ಪಟ್ಟಿಯಲ್ಲಿ ಸೇರಿಸಲಾಗಿದೆ. ಹಾಗೂ ರೂ. 10.00 ಲಕ್ಷಗಳನ್ನು ಒದಗಿಸಿಕೊಳ್ಳಲು ಉದ್ದೇಶಿಸಲಾಗಿದೆ. ಹುಡ್ಕೋ ಯೋಜನೆ ಅನುಷ್ಠಾನಗೊಳ್ಳುವಾಗ ಈ ಕಟ್ಟಡವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಕಂದಾಯ ಇಲಾಖೆಯಲ್ಲಿ ನೀಡುವ ಜಾತಿ ಪ್ರಮಾಣ ಪತ್ರದ ಬಗ್ಗೆ

2956(2895) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ಕೊಡುತ್ತಿರುವ ಜಾತಿ ಪ್ರಮಾಣ ಪತ್ರವನ್ನು ಗ್ರಾಮೀಣಾಭಿವೃದ್ಧಿ ಇಲಾಖಾ ವತಿಯಿಂದ ಗ್ರಾಮ ಪಂಚಾಯಿತಿಯಲ್ಲಿ ಕೊಡಿಸುವಂತೆ ಸರ್ಕಾರ ಆಲೋಚಿಸಿದೆಯೇ;